ಮಂಜೂರಾತಿಗಾಗಿ ಕಳುಹಿಸಿಕೊಡದೆ. ಇರುವುದಕ್ಕೆ ಕಾರಣವೇನು ? ಸಾಮಾನ್ಯವಾಗಿ ಬಜೆಟ್‌ನಲ್ಲಿ ಸೇರಿಸುವಂತಹ ಕಾಮಗಾರಿಗಳ ಬಗ್ಗೆ ಸಪ್ಟೆಂಬರ್-ಅಕ್ಟೋಬರ್ ತಿಂಗಳಲ್ಲಿ ತೀರ್ಮಾನ ಕೈಗೊಳ್ಳುವಂತಹದ್ದು. ಹೋದ ವರ್ಷ ಏಕೆ ತಾಂತ್ರಿಕ ಮಂಜೂರಾತಿಯನ್ನು ಪಡೆದುಕೊಳ್ಳಲಿಲ್ಲ. ಆವರು ಕಳುಹಿಸಿಕೊಟ್ಟಿದ್ದರೆ ಆದರ ಮಂಜೂರಾತಿ ಸಿಕ್ಕುತ್ತಿತ್ತು. ಆಯವ್ಯಯದಲ್ಲೂ ಸೇರುತ್ತಿತ್ತು. ಈಗಲಾದರೂ ಆದನ್ನು ಬೇಗಕಳುಹಿಸಿಕೊಟ್ಟು ಬೇಗನೆ ಕೆಲಸ ಶುರು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ಪಿ. ಪ್ರಕಾಶ್.—ಪ್ರಾಯಶಃ ಚೀಫ್ ಇಂಜಿನೀಯರ್‌ರವರಿಂದ ತಾಂತ್ರಿಕ ಮಂಜೂರಾತಿ ದೊರೆತಿರುವುದಿಲ್ಲ ಅಂತ ಏಕೆ ತಿಳಿಸಲಾಗಿದೆ ಎಂದರೆ, ೧೯೮೮-೮೯ನೇ ಸಾಲಿನಲ್ಲೇ ಈ ಕೆಲಸವನ್ನು ಮಂಜೂರು ಮಾಡದೇ ಇರುವುದಕ್ಕೆ ಕಾರಣವೇನು ? ಅಂತ ಕೇಳಿದ್ದಕ್ಕೆ ಆ ರೀತಿ ಹೇಳಿದ್ದೇವೆ. ಮಾರುಹೊಂದಾಣಿಕೆಗೆ ಅನುಕೂಲವಾಗಲಿಲ್ಲ. ಆದರಿಂದಾಗಿ ೧೯೮೮-೮೯ ಸಾಲಿನಲ್ಲಿ ಆದನ್ನು ತೆಗೆದುಕೊಳ್ಳುವುದಕ್ಕಾಗಲಿಲ್ಲ. ೧೯೮೯-೯೦ನೇ ಸಾಲಿನ ಆಯವ್ಯಯ ಅನುಬಂಧದಲ್ಲಿ ಇದನ್ನು ಸೇರಿಸಲಾಗಿದೆ. ಬರುವ ವರ್ಷ ಕ್ರಮ ಕೈಗೊಳ್ಳಲಾಗುವುದು. ತಾಂತ್ರಿಕ ಮಂಜೂರಾತಿಯನ್ನೂ ಮುಖ್ಯ ಇಂಜಿನೀಯರ್‌ರವರಿಂದ ಪಡೆಯುತ್ತೇವೆ. ಆ ಕೆಲಸವನ್ನು ಮುಂದಿನ ಸಾರಿ ಪ್ರಾರಂಭಿಸಲಾಗುವುದು.

ಬಂಟ್ವಾಳ ಪುರಸಭೆಗೆ ಕುಡಿಯುವ ನೀರಿನ ಸರಬರಾಜು

(೭೭೦) ಶ್ರೀ ರಮಾನಾಥರೈ (ಬಂಟವಾಳ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಬಂಟ್ವಾಳ ಪುರಸಭೆಯ ಜನಸಂಖ್ಯೆ ಎಷ್ಟು ? ಹಾಗೂ ಆದರ ವಿಸ್ತೀರ್ಣ ಎಷ್ಟು ?

ಆ) ಪುರಸಭೆಯವರು ಇದುವರೆಗೆ ಕುಡಿಯುವ ನೀರಿನ ಪೂರೈಕೆಯಲ್ಲಿ ಸಾಧಿಸಲಾದ ಪ್ರಗತಿ ಎಷ್ಟು ?

ಇ) ಕುಡಿಯುವ ನೀರಿನ ಕೊರತೆಯಿಂದಾಗಿ ಜನರು ಬವಣೆ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಈ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಿ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳುವುದೆ ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು).—

ಅ) ೧೯೮೧ನೇ ಸಾಲಿನ ಜನಗಣತಿಯ ಪ್ರಕಾರ ೩೧,೩೭೮. ಈ ಪುರಸಭೆಯ ಒಟ್ಟು ವಿಸ್ತೀರ್ಣ ೬೩೫೮ ಎಕರೆ ಅಥವಾ ೨೫೫.೭೩ ಚದರ ಕಿಲೋ ಮೀಟರ್‌ಗಳು.

ಆ) ಬಂಟ್ವಾಳ ಪಟ್ಟಣಕ್ಕೆ ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರು ಸರಬರಾಜು ಯೋಜನೆಯನ್ನು ನೇತ್ರಾವತಿ ನದಿಯನ್ನು ಮೂಲವಾಗಿಟ್ಟುಕೊಂಡು ೧೯೭೩ರಲ್ಲಿ ಪ್ರಾರಂಭಿಸಿ ೧೧-೬೫ರಲ್ಲಿ ಮುಗಿಸಿ ನೀರನ್ನು ಕೊಡಲಾಗುತ್ತಿದೆ. ಇದಲ್ಲದೆ ಈ ಪಟ್ಟಣದಲ್ಲಿ ಇದುವರೆಗೂ ೩೦ ಕೊಳವೆ ಬಾವಿಗಳನ್ನು ತೋಡಲಾಗಿದೆ, ಹಾಲಿ ಬಂಟ್ವಾಳ ಪುರಸಭೆಯವರು ತಲಾ ದಿನಂ ಪ್ರತಿ ೪೦ ಲೀಟರ್ ನೀರನ್ನು ಸಾರ್ವಜನಿಕರಿಗೆ ಸರಬರಾಜು ಮಾಡುತ್ತಿದ್ದಾರೆ.

ಇ) ಬಂದಿದೆ.

ಈ) ಈ ಪಟ್ಟಣಕ್ಕೆ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ರೂ. ೮೮.೫೦ಲಕ್ಷಗಳಿಗೆ ಒಂದು ಯೋಜನೆ ಅಂದಾಜನ್ನು ತಯಾರಿಸಲಾಗಿದೆ.

ಶ್ರೀ ರಾಮನಾಥ ರೈ —ಮಾನ್ಯ ಅಧ್ಯಕ್ಷರೇ, ಬಂಟ್ವಾಳ ಪುರಸಭೆ ಒಂದು ವಿಶಿಷ್ಟವಾದ ಪುರಸಭೆ ಎರಡು ವಿಧಾನ ಸಭೆ ಕ್ಷೇತ್ರ ಹಾಗೂ ಎರಡು ಲೋಕಸಭೆ ಕ್ಷೇತ್ರಗಳು ಮೂರು ಪಂಚಾಯಿತಿಗಳನ್ನು ಸೇರಿ ಪುರಸಭೆಯನ್ನು ರಚನೆ ಮಾಡಿಕೊಂಡಿದ್ದಾರೆ. ಶೇಕಡ ೭೦ ಭಾಗ ಗ್ರಾಮೀಣ ಪ್ರದೇಶಗಳು ಸೇರಿಕೊಂಡು ಈ ಒಂದು ಪುರಸಭೆಯ ರಚನೆ ಆಗಿದೆ. ಶೇಕಡ ೨೦ ಭಾಗ ಜನರಿಗೆ ಮಾತ್ರ ರಾಷ್ಟ್ರೀಯ

ಗ್ರಾಮೀಣ ನೀರು ಸರಬರಾಜು ಯೋಜನೆಯಡಿಯಲ್ಲಿ ನೀರು ಸಪ್ಲೈ ಆಗುತ್ತಿದೆಯೆಂದು ಮಾನ್ಯ ಸಚಿವರು ಹೇಳಿದ್ದಾರೆ. ಉಳಿದ ಭಾಗದ ಜನರಿಗೆ ನೀರು ಸಿಗುತ್ತಾ ಇಲ್ಲ. ಈಗ ೮೦ ಲಕ್ಷ ರೂಪಾಯಿಗಳ ಯೋಜನೆ ಒಂದನ್ನು ತಯಾರು ಮಾಡಲಾಗಿದೆ ಎಂದು ತಿಳಿಸಿದ್ದಾರೆ. ಆದರೆ ಈ ಯೋಜನೆಯನ್ನು ಮಾಡಿ ಅನೇಕ ವರ್ಷಗಳಾಯಿತು. ಪುರಸಭೆಯವರಿಗೆ ಈ ಯೊಜನೆ ಬಗ್ಗೆ ದುಡ್ಡನ್ನು ಭರ್ತಿ ಮಾಡಲಿಕ್ಕೆ ಶಕ್ತಿ ಇಲ್ಲ. ಸರ್ಕಾರದವರೇ ಮಾಡಬೇಕಾಗಿದೆ. ಎಂದು ಅನೇಕ ಸಲ ಮನವಿ ಮಾಡಿದ್ದರು ಕೂಡ ಇದು ಆಗಿಲ್ಲ. ಗ್ರಾಮೀಣ ಪ್ರದೇಶವನ್ನು ಸೇರಿಸಿಕೊಂಡು ನಗರಸಭೆ ಆಗಿದೆ ಇದರಲ್ಲಿ ಹಳ್ಳಿ ಪರಿಮಿತಿಯನ್ನು ಮುಕ್ತ ಮಾಡಬೇಕೆಂದು ಹಳ್ಳಿ ಜನಗಳು ಹೇಳುತ್ತಿದ್ದಾರೆ. ಬಂಟ್ವಾಳದಲ್ಲಿ ಬಹಳ ಗಂಭೀರವಾದ ಪರಿಸ್ಥಿತಿ ಇದೆ. ಈ ಜನಗಳ ವಿಚಾರದಲ್ಲಿ ಯೊ ಜನೆ ಮಾಡಿ ಸರಿಯಾದ ಪರಿಹಾರವನ್ನು ಹುಡುಕಬೇಕೆಂದು ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಸದಸ್ಯರು ಹೇಳುವಂತೆ ಅಲ್ಲಿ ಕುಡಿಯುವ ನೀರಿನ ಜ್ವಲಂತ ಸಮಸ್ಯೆ ಇದೆ ನಿಜ. ಆದರೆ ೮೮ ಲಕ್ಷ ರೂಪಾಯಿಗಳ ಸ್ಕೀಂ ರೆಡಿಯಾದ ಮೇಲೆ ಬಂಟ್ವಾಳ ನಗರ ಸಭೆಯಲ್ಲಿ ಇದರ ಬಗ್ಗೆ ಕೌಂಟರ್ ಪ್ರಿಗ್ನೇಚರ್ ಸಹ ಆಗಿದೆ. ೨೦ ಸಾವಿರದ ಮೇಲೆ ಪಾಪ್ಯುಲೇಷನ್ ಇರುವುದರಿಂದ ಇದಕ್ಕೆ ಕಾಂಟ್ರಿಬ್ಯೂಷನ್ ಮಾಡಬೇಕಾಗಿದೆ. ಅರ್ಬನ್ ವಾಟರ್ ಸಪ್ಲೈ ಸ್ಕೀಮ್‌ನಿಂದ ಇದನ್ನು ಮಾಡಬೇಕಾಗಿದೆ. ಮೂರನೆ ಒಂದಂಶ ಹಣವು ಮುನಿಸಿಪಾಲಿಟಿಯಿಂದ ಬರಬೇಕಾಗಿದೆ. ಅವರ ಕಡೆಯಿಂದ ಹಣ ಬರುತ್ತಿಲ್ಲ ಈ ಯೋಜನೆಯನ್ನು ತಕ್ಷಣ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಆದರೂ ಮಾನ್ಯ ಸದಸ್ಯರ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಅದನ್ನು ಪರಿಶೀಲನೆ ಮಾಡಿ ಈ ಸಮಸ್ಯೆ ಪರಿಹರಿಸುವ ಬಗ್ಗೆ ಪರಿಶೀಲಿಸುತ್ತೇನೆ.

ಶ್ರೀ ರಾಮನಾಥ ರೈ.—ಈಗ ೮೮ಲಕ್ಷ ರೂಪಾಯಿಗಳ ಯೋಜನೆಯನ್ನು ತಯಾರಿಸಲಾಗಿದೆ. ಅದಕ್ಕೆ ಪ್ರತಿಯಾಗಿ ಪುರಸಭೆಗಳೂ ಸಹ ಪರ್ಸೆಂಟೇಜ್ ಕೊಡಬೇಕಾಗುತ್ತದೆ ಎಂದು ಮಾನ್ಯ ಸಚಿವರು ತಿಳಿಸಿದ್ದಾರೆ. ಪುರಸಭೆಗಳಿಗೆ ಖಂಡಿತವಾಗಿ ಈ ಪರ್ಸೆಂಟೇಜ್ ಕೊಡತಕ್ಕ ಶಕ್ತಿ ಇಲ್ಲ. ಸರ್ಕಾರವೇ ಈ ಕೆಲಸವನ್ನು ಮಾಡಬೇಕಾಗಿದೆ. ಈ ನಗರ ಸಭೆಯಲ್ಲಿ ಹಳ್ಳಿ ಪ್ರದೇಶವಿರುವುದರಿಂದ ಈ ಪ್ರದೇಶದಲ್ಲಿ ಬೋರ್‌ವೆಲ್ಸ್‌ಗಳನ್ನಾದರೂ ಒದಗಿಸಿಕೊಡಬೇಕು. ೧೦ ಬೋರ್‌ವೆಲ್ಸ್‌ಗಳನ್ನು ಹಾಕುವಂತಹ ಯೋಜನೆ ಬಗ್ಗೆ ಸಚಿವರ ಅಭಿಪ್ರಾಯವನ್ನು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ.—ಈಗ ರೂರಲ್ ವಾಟರ್ ಸಪ್ಲೈಗೆ ಸಂಬಂಧಪಟ್ಟಂತೆ ಮಾನ್ಯ ಆರ್. ಎನ್. ನಾಯಕರು ಕೇಳಿದ ಪ್ರಶ್ನೆಗೆ ಉತ್ತರ ಹೇಳಿದ್ದೇನೆ. ಕೇಂದ್ರ ಸರ್ಕಾರದಿಂದ ಪೈಪ್, ಬೋರ್‌ವೆಲ್ಸ್, ವಾಟರ್ ಸಪ್ಲೈ ಸ್ಕೀಮನ್ನು ಡೀಲ್ ಮಾಡುವುದಕ್ಕೆ ಹಣ ಬರುತ್ತದೆಂದು ಹೇಳಿದ್ದೇನೆ. ಆದರೆ ಅರ್ಬನ್ ವಾಟರ್ ಸಪ್ಲೈಗೆ ಒಂದು ಪೈಸಾ ಕೂಡ ಕೇಂದ್ರ ಸರ್ಕಾರದಿಂದ ಬರುವುದಿಲ್ಲ. ಅರ್ಬನ್ ಏರಿಯಾದಲ್ಲಿ ಅರ್ಬನ್ ಸಪ್ಲೈ ಬಗ್ಗೆ ಏನು ಪ್ರಾಬ್ಲಮ್ಸ್ ಇವೆ, ಏನು ಸ್ಕೇರ್ಸಿಟಿ ಇದೆ, ಇವೆಲ್ಲವನ್ನು ಬಗೆಹರಿಸಬೇಕಾದರೆ ನಾವು ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿಗೆ ಅನುಗುಣವಾಗಿ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ನಾವು ಈಗಾಗಲೇ ಕೇಂದ್ರಸರ್ಕಾರಕ್ಕೆ ಈ ವಿಷಯವನ್ನು ತಿಳಿಸಿದ್ದೇವೆ. ಗ್ರಾಮೀಣ ವಾಟರ್ ಸಪ್ಲೈಗೆ ತಾವು ಯಾವ ಪ್ರಕಾರ ಸಹಾಯ ನೀಡುತ್ತೀರೋ ಅದೇ ಪ್ರಕಾರ ಅರ್ಬನ್ ಪ್ರದೇಶಕ್ಕೂ ಕೊಡಬೇಕೆಂದು ಹೇಳಿದ್ದೇವೆ. ೧೦–೧೫ ಬೋರ್‌ವೆಲ್ಸ್‌ಗಳನ್ನು ಕೂಡಲೇ ತೆಗೆಸಬೇಕೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ೧೦–೧೫ ತೆಗೆಸುವುದಕ್ಕೆ ಸಾಧ್ಯವಾಗುವುದಿಲ್ಲ, ಆದರೆ ಮಿನಿಮಮ್ ಎಷ್ಟು ತೆಗೆಸುವುದಕ್ಕೆ ಸಾಧ್ಯ ಇದೆ ಅದನ್ನು ೧೫ ದಿವಸದೊಳಗೆ ಮಾಡಿ ಕೊಡುತ್ತೇನೆ.

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಸಚಿವರು ಹೇಳಿತಕ್ಕದ್ದನ್ನು ಕೇಳಿದೆ ಯಾವುದಾದರೂ ವಾಟರ್ ಸಪ್ಲೈ ಸ್ಕೀಮ್ ಜಾರಿ ಮಾಡಬೇಕಾದರೆ ೧/೩ ಅಮೌಂಟ್ ಅನ್ನು ಪುರಸಭೆ ಕೊಡಬೇಕೆಂದು ಇದೆ. ಪುರಸಭೆ ಅಕ್ಟ್ರಾಯ್ ಅಬಾಲಿಷ್ ಮಾಡಿದ ಮೇಲೆ ಪುರಸಭೆಗಳ ಹತ್ತಿರ ಹಣ ಇಲ್ಲ. ಈ ಬಗ್ಗೆ ಒಂದು ಅಮೆಂಡ್‌ಮೆಂಟ್ ಅನ್ನು ತರಬೇಕಾದ ಅವಶ್ಯಕತೆ ಇದೆ. ನೀವು ಪುರಸಭೆಗಳಿಗೆ ೧/೩ ಅಮೌಂಟ್ ಕೊಟ್ಟರೆ ಮಾತ್ರ ವಾಟರ್ ಸಪ್ಲೈ ಸ್ಕೀಮ್ ತೆಗೆದುಕೊಳ್ಳುತ್ತೆ ಎಂದು ಹೇಳಿದರೆ ನೀವು ಎಲ್ಲಾ ಕೊಡಲಿಕ್ಕೆ ಆಗುವುದಿಲ್ಲ. ಆದ್ದರಿಂದ ಈ ಬಗ್ಗೆ ಈ ಸದನದಲ್ಲಿ ಒಂದು ತಿದ್ದುಪಡಿಯನ್ನು ತರಬೇಕಾಗುತ್ತದೆ. ಒಂದು ಅಮೆಂಡ್‌ಮೆಂಟ್ ಅನ್ನು ಕೂಡಲೇ ಮಾಡಬೇಕಾಗುತ್ತದೆ ಎಂದು ಹೇಳುತ್ತೇನೆ. ಎಲ್ಲಿಯವರೆಗೆ ೧/೩ ಅಮೌಂಟ್ ನೀವು ಕೊಡುವುದಿಲ್ಲವೋ ಅಲ್ಲಿಯವರೆಗೆ ಎಲ್ಲಾ ಕಡೆ ವಾಟರ್ ಸಪ್ಲೈ ಸ್ಕೀಂ ಅನ್ನು ಜಾರಿ ಮಾಡುವುದಕ್ಕಾಗುವುದಿಲ್ಲ. ನನ್ನ ಕಾಲದಲ್ಲಿ ಎಷ್ಟೊ ವಾಟರ್

ಸಪ್ಲೈ ಸ್ಕೀಮುಗಳಿಗೆ ಅನುಮತಿ ಕೊಟ್ಟಿದ್ದೇವೆ. ಈಗ ಪುರಸಭೆಗಳ ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲ. ಅದಕ್ಕೆ ತಾವು ದೊಡ್ಡ ಮನಸ್ಸು ಮಾಡಿ ಸರ್ಕಾರದ ಕಡೆಯಿಂದ ಪೂರ್ಣವಾಗಿ ಹಣ ಕೊಟ್ಟು ಮಾಡಿಸಿ ತಕ್ಕಂಥ ಪ್ರಯತ್ನ ಮಾಡಬೇಕು.

ಶ್ರೀ ಆರ್.ವಿ. ದೇಶಪಾಂಡೆ.—ಪ್ರತಿವರ್ಷ ೯ ಕೋಟಿ ರೂಪಾಯಿಗೆ ಮೇಲೆ ವಾಟರ್‌ಬೋರ್ಡ್‌ಗೆ ಕೊಟ್ಟಿದ್ದಿಲ್ಲ. ಆದರೆ ನಾವು ಮುಂದಿನ ವರ್ಷದ ಮುಂಗಡ ಪತ್ರದಲ್ಲಿ ೨೦ ಕೋಟಿ ಕೊಟ್ಟಿದ್ದೇವೆ. ನೀವು ಅದನ್ನು ರಿಯಲೈಸ್ ಮಾಡಬೇಕು. ಅರ್ಬನ್ ವಾಟರ್ ಸಪ್ಲೈಗೆ ಹೆಚ್ಚಿನ ಮಹತ್ವ ಕೊಡಬೇಕು ಎಂದು ಮುಂದಿನ ವರ್ಷದ ಬಜೆಟ್‌ನಲ್ಲಿ ೨೦ ಕೋಟಿ ಕೊಟ್ಟಿದ್ದೇವೆ. ಅವರು ಹೇಳತಕ್ಕಂಥ ಸಮಸ್ಯೆಯನ್ನು ನಾವು ಒಪ್ಪಿಕೊಳ್ಳುತ್ತೇವೆ. ನಾನು ಅವರ ಸಹಕಾರವನ್ನು ಕೇಳುತ್ತಾ ಇದ್ದೇನೆ. ನಾವೂ ಅವರೂ ಕೂಡ ಕೇಂದ್ರ ಸರ್ಕಾರಕ್ಕೆ ಈ ಬಗ್ಗೆ ಒತ್ತಾಯ ಮಾಡಬೇಕಾಗಿದೆ. ಅರ್ಬನ್ ವಾಟರ್‌ಸಪ್ಲೈಗೆ ಕೇಂದ್ರದಿಂದ ಒಂದು ಪೈಸೆ ಸಹಾ ಬರುತ್ತಾ ಇಲ್ಲ. ಕೇಂದ್ರ ಸರ್ಕಾರದಿಂದ ಸಹಾಯ ಬರಬೇಕು. ಆಗ ಹೆಚ್ಚಿನ ಪ್ರಮಾಣದಲ್ಲಿ ಈ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಸಾಧ್ಯವಾಗಬಹುದು. ಆದರೆ ಮಾನ್ಯ ಸದಸ್ಯರು ಆಮೆಂಡ್‌ಮೆಂಟ್ ಬಗ್ಗೆ ಏನು ಹೇಳಿದ್ದಾರೆ ಅದು ನನಗೆ ಗೊತ್ತಿಲ್ಲ. ಅದನ್ನು ಪರಿಶೀಲಿಸುತ್ತೇನೆ. ಪುರಸಭೆಗೆ ಮತ್ತು ನಗರಸಭೆಗೆ ಸಹಾಯ ಮಾಡುವದಕ್ಕೆ ಸಾಧ್ಯವಾದರೆ ಮಾಡುತ್ತೇವೆ.

ಶ್ರೀ ಧರ್ಮಸಿಂಗ್.—ಮುಂದಿನ ವರ್ಷದಲ್ಲಿ ಬಜೆಟ್‌ನಲ್ಲಿ ೨೦ ಕೋಟಿ ಕೊಟ್ಟಿದ್ದೇವೆಂದು ಹೇಳಿದ್ದೀರಿ. ೧೯೮೭-೮೮ಕ್ಕೆ ಇದ್ದ ಬೇಡಿಕೆ ೫೮ ಕೋಟಿ ರೂಪಾಯಿಗಳು. ಆದರೆ ಮುಂದಿನ ವರ್ಷಕ್ಕೆ ೨೦ ಕೋಟಿ ಇಟ್ಟಿದ್ದೇವೆ ಎಂದು ಏನು ಹೇಳಿದ್ದೀರಿ, ಇದರಲ್ಲಿ ಯಾವ ವಾಟರ್ ಸಪ್ಲೈ ಸ್ಕೀಮನ್ನು ಮಂಜೂರು ಮಾಡಿಸುವುದಕ್ಕಾಗುವುದಿಲ್ಲ. ಈಗ ವಾಟರ್ ಸಪ್ಲೈ ಸ್ಕೀಮ್‌ಗಳನ್ನು ಎಲ್ಲಿ ಪ್ರಾರಂಭ ಮಾಡಿದ್ದೀರಿ ಅದನ್ನು ಮುಂಜೂರು ಮಾಡಿಸಬೇಕು ಎಂಬ ಮನಸ್ಸು ಸರ್ಕಾರಕ್ಕೆ ಇದ್ದರೆ ಕೊನೆಯ ಪಕ್ಷ ೧೦೦ ಕೋಟಿ ಆದರೂ ಕೊಡಿ. ಇಲ್ಲದೇ ಇದ್ದರೆ ಬಹಳ ಕಷ್ಟವಾಗುತ್ತದೆ.

SRI R. V. DESHPANDE.—Sir, during 1988-89 we had made a provision of rupees nine and one crores. But the Hon'ble Chief Minister in his Budget speech as given seven crores more this year. And for next year it will be 20 crores. Never in the history of the Water Board such an amount has been allotted to the Water Board. As you have rightly said we require 30 to 40 crores. How can the Government give? Government has got its own limitations. It is difficult to provide money at a stretch. ಆದುದರಿಂದ ಆದಷ್ಟು ಮಟ್ಟಿಗೆ ಸಮಸ್ಯೆಯನ್ನು ಆರ್ಥ ಮಾಡಿಕೊಂಡು ಇದನ್ನು ಬಗೆಹರಿಸಲಿಕ್ಕೆ ಪ್ರಯತ್ನ ಮಾಡುತ್ತಾ ಇದ್ದೇವೆ. ಬಂಟ್ವಾಳದ ನೀರಿನ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ರಾಮನಾಥ ರೈ.—೩ ಗ್ರಾಮಗಳು ಸೇರಿ ನಮ್ಮ ಪುರಸಭೆಯಾಗಿದೆ. ಇದಕ್ಕೆ ಶೇಕಡ ೭೫ ಭಾಗದಷ್ಟು ಗ್ರಾಮಾಂತರ ಪ್ರದೇಶಗಳಿಗೆ ಜಿಗತಕ್ಕ ಸೌಲಭ್ಯ ಸಿಕ್ಕಿಲ್ಲ. ಪುರಸಭೆಯಿಂದ ಜಿಗತಕ್ಕ ಸೌಲಭ್ಯ ಇಲ್ಲ. ಮಾನ್ಯ ಮಂತ್ರಿಗಳು ಭರವಸೆ ಕೊಡಬೇಕು.....

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ.—ಗಲಾಟೆ ಕಡಿಮೆ ಮಾಡಿದರೆ ಬೋರ್‌ವೆಲ್ಸ್ ಮಾಡುತ್ತೇವೆ.

ACCOUNTS OPERATED BY MANDAL PANCHAYATS OF KOTTUR

222 (794) SRI K. V. RAVINDRANATH BABU.—Will the Minister for Rural Development and Panchayat Raj be pleased to answer for the following questions :

a) Whether it is not a fact that two accounts are being operated by Mandal Panchayats of Kottur as Account No. 1 and 2?